ಶ್ರೀ ಹೆಚ್.ಡಿ. ರೇವಣ್ಣ : ಈಗಾಗಲೇ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಈ ಬ್ರಿಡ್ಜ್‌ಗೆ ಸುಮಾರು 3 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ನಮ್ಮ ಇಲಾಖೆಯವರು ಈ ಯೋಜನೆಗೆ 15 ಕೋಟಿ ರೂಪಾಯಿಗಳು ಬೇಕು ಎಂದು ಹೇಳುತ್ತಿದ್ದಾರೆ. 6 ಕೋಟಿ ರೂಪಾಯಿಗಳಾದರೆ ಸಾಕು ಎಂದು ಮಾನ್ಯ ಶಾಸಕರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅವರನ್ನು ಮತ್ತು ನಮ್ಮ ಇಲಾಖೆಯವರನ್ನು ಒಂದು ಮೀಟಿಂಗ್ ಕರೆದು, ಅದಕ್ಕೆ ಏನು ಮಾಡಬೇಕೋ ಅದನ್ನು ಮಾಡಲು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇವೆ.

ವಿಷಯ : ಬಳ್ಳಾರಿ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆ

215(1277) ಶ್ರೀ ಎಂ. ಮಹದೇವ (ಕೃಷ್ಣರಾಜ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಳ್ಳಾರಿ ಜಿಲ್ಲೆಯಲ್ಲಿ ಅಕ್ರಮವಾಗಿ ನಡೆಸುತ್ತಿರುವ ಗಣಿಗಾರಿಕೆಗಳು ಎಷ್ಟು: (ಸಂಪೂರ್ಣ ವಿವರಗಳನ್ನು ಒದಗಿಸುವುದು);

ಆ) ಇದುವರೆಗೂ ಎಷ್ಟು ಅಕ್ರಮ ಗಣಿಗಾರಿಕೆಗಳನ್ನು ಪತ್ತೆ ಹಚ್ಚಲಾಗಿದೆ: (ಸಂಸ್ಥೆಗಳ ಹೆಸರು, ಅವಧಿ ಮುಂತಾದ ಪೂರ್ಣ ಮಾಹಿತಿಯನ್ನು ಒದಗಿಸುವುದು);

ಇ) ಬಳ್ಳಾರಿ ಜಿಲ್ಲೆಯಲ್ಲಿನ ಅಕ್ರಮ ಗಣಿಗಾರಿಕೆಗಳಿಂದಾಗಿ ರಾಜ್ಯದ ಬೊಕ್ಕಸಕ್ಕೆ ಇದುವರೆವಿಗೂ ಆಗಿರುವ ಅಂದಾಜು ನಷ್ಟದ ಪ್ರಮಾಣ ಎಷ್ಟು;

ಈ) ಬಳ್ಳಾರಿ ಜಿಲ್ಲೆಯಲ್ಲಿ ಇಂತಹ ಅಕ್ರಮ ಗಣಿಗಾರಿಕೆ ಚಟುವಟಿಕೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರವು ಇದುವರೆವಿಗೆ ಕೈಗೊಂಡ ಕ್ರಮಗಳೇನು (ಪೂರ್ಣ ಮಾಹಿತಿಯನ್ನು ಒದಗಿಸುವುದು)?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಬಳ್ಳಾರಿ ಜಿಲ್ಲೆಯಲ್ಲಿ 78 ಅಕ್ರಮ ಗಣಿಗಾರಿಕೆ ಪ್ರಕರಣಗಳನ್ನು ಪತ್ತೆ ಮಾಡಲಾಗಿದ್ದು, ಅವುಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇದುವರೆವಿಗೂ 78 ಅಕ್ರಮ ಗಣಿಗಾರಿಕೆಗಳನ್ನು ಪತ್ತೆ ಹಚ್ಚಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಬಳ್ಳಾರಿ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆಯನ್ನು ಗುರುತಿಸಿ ಅವುಗಳನ್ನು ತಡೆಗಟ್ಟಲಾಗಿದೆ. ಇಂತಹ 259 ಪ್ರಕರಣಗಳಲ್ಲಿ ದಂಡವಿಧಿಸಿ 1.43 ಕೋಟಿ ರೂ.ಗಳ ಹಣ ವಸೂಲು ಮಾಡಲಾಗಿದೆ. ಅಕ್ರಮ ಗಣಿಗಾರಿಕೆ ಮಾಡುವವರಿಂದ ರಾಜಧನ (ರಾಯಲ್ಟಿ) ವಸೂಲಾತಿ ಮಾಡಿರುವುದಲ್ಲದೆ, ಬಹಳಷ್ಟು ಪ್ರಕರಣಗಳಲ್ಲಿ ಮುಟ್ಟುಗೋಲು ಮಾಡಿಕೊಂಡ

ಖನಿಜಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಿದೆ. ಆದ್ದರಿಂದ, ರಾಜ್ಯದ ಬೊಕ್ಕಸಕ್ಕೆ ನಷ್ಟವಾಗಿರುವುದಿಲ್ಲ.

ಈ) ಸರ್ಕಾರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಟಾಸ್ಕ್ ಫೋರ್ಸ್ ಸಮಿತಿಗಳನ್ನು ರಚಿಸಿದೆ. ಈ ಸಮಿತಿಯಲ್ಲಿ ಜಿಲ್ಲಾ ಪೊಲೀಸ್ ಮುಖ್ಯಸ್ಥರು, ಸಾರಿಗೆ ಇಲಾಖೆಯ ಅಧಿಕಾರಿಗಳು, ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಸದಸ್ಯರಾಗಿರುತ್ತಾರೆ. ಈ ಸಮಿತಿಯು ಅಕ್ರಮ ಗಣಿಗಾರಿಕೆಯನ್ನು ಗುರುತಿಸಿ ಅವರ ವಿರುದ್ಧ ಕಾನೂನಿನ ಕ್ರಮ ಕೈಗೊಳ್ಳುತ್ತಿದೆ. ಹೊಸಪೇಟೆ ಮತ್ತು ಸಂಡೂರು ಪ್ರದೇಶಗಳಲ್ಲಿ 5 ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆ. ಚೆಕ್ ಪೋಸ್ಟ್‌ಗಳಲ್ಲಿ ತೂಕದ ಯಂತ್ರ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ. ಗಣಿ ಗುತ್ತಿಗೆಗಳ ಚೆಕ್ಕುಬಂದಿಗಳನ್ನು ಗುರುತಿಸಲು ಅರಣ್ಯ, ಕಂದಾಯ ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗಳಿಂದ ಜಂಟಿ ಮೋಜಣಿ ಮಾಡಲಾಗುತ್ತಿದೆ.

ಜಿಲ್ಲೆಯಲ್ಲಿ ಸಾರ್ವಜನಿಕರ ದೂರು ದಾಖಲು ಮಾಡಲು ಸಹಾಯ ವಾಣಿ (ಹೆಲ್ಪ್ ಲೈನ್) ಸ್ಥಾಪಿಸಿದೆ. ಅನಧಿಕೃತ ಗಣಿಗಾರಿಕೆ, ಖನಿಜ ಶೇಖರಣೆ ಮತ್ತು ಸಾಗಾಣಿಕೆಯನ್ನು ತಡೆಯಲು ಪೊಲೀಸ್ ಅರಣ್ಯ, ಕಂದಾಯ ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಇದುವರೆವಿಗೂ 162 ಪ್ರಕರಣಗಳನ್ನು ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ. 259 ಪ್ರಕರಣಗಳಲ್ಲಿ ದಂಡ ವಿಧಿಸಿ ರೂ. 1.43 ಕೋಟಿ ಹಣ ವಸೂಲು ಮಾಡಲಾಗಿದೆ.

ANNEXURE

LIST OF ILLEGAL MINING ACTIVITIES DETECTED IN BELLARY DISTRICT (PATTA LANDS)

Sl. No.	Name	Sy.No. & Village	Taluk	Extent in acres	Mineral
1	2	3	4	5	6
1	N. Srinivas Haraginadouni	62	Bellary	6-34	Iron ore
2	T. Srinivas	126 of Belagal	Bellary	9-97	Iron ore

1	2	3	4	5	6
3	B. Arjun	424/B Belagal	Bellary	4-02	Iron ore
4	T. Arvind Kumar	406 & 407 Belagal	Bellary	3.90 & 2.44	Iron ore
5	Jasthi Kannayya Chowdary	91 Belagal	Bellary	4.00	Iron ore
6	C. Anil Babu	125 & 124 Belagal	Bellary	15.72	Iron ore
7	Ramanayka	141, 153 Kallahalli	Hospet	3.00	Iron ore
8	Mangaldeep	146/05 Kallahally	Hospet	7.00	Iron ore
9	Pompanna	Ingalagi	Hospet	2.00	Iron ore
10	N. Srinivas	4 M.G. Gangalapura Thoranagallu Hobli	Sandur	18-10	Iron ore
11	Yeribaba & Myeeb Ahmed	50 E Ubbalagundi	Sandur	4-36	Iron ore
12	Shydaja Rama Setty	48 & 49 of Laxmipura	Sandur	9-75 & 8-55	Iron ore
13	Shivaj Rao Gharpadee	5 Laxmipura	Sandur	5-38	Iron ore
14	S. Mujeeb Ahmed	113/B Laxmipura	Sandur	16-00	Iron ore
15	Sajjan Kayal	114/3 and 4 Jambunthanagar	Sandur	8-32	Iron ore
16	B. Sheshanna Setty	159 of Yeshwanthanagar	Sandur	8-32	Iron ore

1	2	3	4	5	6
17	B. Ashok Kumar	70 of Dharmapura	Sandur	2-11	Iron ore
18	N. Srinivas	107/A2, 107/B11 Taranagallu Vittalapura	Sandur	11-30	Iron ore
19	Dasara Yellamma	236/P12 Hulikunte	Sandur	5-00	Iron ore
20	K. Sadashiva Reedy	151/A Kariganur	Hospet	3-50	Iron ore
21	T. Ravi Kumar	27A/2 Jambunatha nahalli	Hospet	3-6	Iron ore
22	H.K. Kumara Swamy	223 Bhujanga Nagar	Sandur	8-25	Iron ore
23	G. Devendrappa	115 Rajapura	Hospet	11-60	Iron ore
24	Mohammed Rafiq Niyazi	242/2 Ingalgi	Hospet	3-00	Iron ore
25	Syed Jilan	89/P15 & 89/17 Venkatagiri	Sandur	2 Acres 1-5 Acres	Iron ore
26	B. Anoop	1/P4 Vittalanagar	Sandur	3-00	Iron ore
27	G. Basappa	303 of Bhujanga Nagara	Sandur	1-68	Iron ore
28	S. Narasimha Kumar	205 of Lakshmipura	Sandur	3-00	Iron ore

1	2	3	4	5	6
29	Mohammed Imam Ziazi	178/A Sankala pura	Hospet	40-00	Iron ore
30	B.L. Rani Samyuktha	238 Ingalgi	Hospet	4-00	Iron ore
31	M.A. Kasim	76/c Jambunathanahalli	Hospet	2.00	Iron ore
32	C.H. Mohan Rao	21 Ramgad	Sandur	12.00	Iron ore
33	H. Ibrahim	111 & 113 Taranagar	Sandur	2-99 &	Iron ore
34	Harijana Basanna	46/1 Narayana pura	Sandur	6-04	Iron ore
35	Harijana Basanna	44/1 Narayana pura	Sandur	8-90	Iron ore
36	H.T. Naga Reddy	98/1 Narayana pura	Sandur	4-88	Iron ore
37	H.T. Nagareddy	126 Ubbalagundi	Sandur	17-18	Iron ore
38	H.T. Nagareddy	23 Narayanapura	Sandur	4-47	Iron ore
39	H.T. Nagareddy	80/3 Narayanapura	Sandur	3-80	Iron ore
40	H.T. Nagareddy	30 Narayanapura	Sandur	0-50	Iron ore
41	Harijana Dasa Ramappa	225 Bhajanganagara	Sandur	9-97	Iron ore
42	S.K. Govardan	148 Lakshmipura	Sandur	1-28	Iron ore

1	2	3	4	5	6
43	H.K. Kumara swamy	286 Bujanganagara	Sandur	9.32	Iron ore
44	N. Kumara swamy	68/2 Narayanapura	Sandur	4.83	Iron ore
45	Shivamma	68/1 Narayanapura	Sandur	8.49	Iron ore
46	K. Naveen Kumar	236/P6 Laxmipura	Sandur	4.00	Iron ore
47	Vadra Kumarappa	138 Yashwantha Nagar	Sandur	27.43	Iron ore
48	Harijana Shantakka	43 P/4 Narayanapura	Sandur	4.00	Iron ore
49	Meera Bai	70 Dharmapura	Sandur	4.23	Iron ore
50	Edigara Karupayya	236 P/7 Hulikunte	Sandur	2.00	Iron ore
51	M. Kumarappa	284 & 285 Bujanganagara	Sandur	8.77	Iron ore
52	Harijana Mallaiah	44/3E Narayanapura	Sandur	2.61	Iron ore
53	T. Pushparaj	298 Bujanganagara	Sandur	0.65	Iron ore
54	N. Srinivasa	4 Vittalapura Vg	Sandur	1.52	Iron ore
55	Chittanna	1/P6 Vittalanagar	Sandur	2.50	Iron ore

1	2	3	4	5	6
56	R. Veeresha	118 Dharmapura	Sandur	3.58	Iron ore
57	T. Pushparaju	52 Bhujanganagar	Sandur	2.43	Iron ore
58	Neelakantappa	147/2 & 147/3 Lakshmipura	Sandur	2.63	Iron ore
59	K. Sathish Kumara	54/1 Bhujanganagar	Sandur	1.66	Iron ore
60	H.T. Nagareddy	16 Narayanapura	Sandur	31.57	Iron ore
61	H.T. Nagareddy	17 Narayanapura	Sandur	5.00	Iron ore
62	H.T. Nagareddy	60 Narayanapura	Sandur	3.88	Iron ore
63	K. Gopala krishna	211 Ingalgi	Hospet	2.56	Iron ore
64	Kanivehalli Obbaiah	42 Muraripura	Sandur	8.45	Iron ore
65	S. Basavaraja	53/P8/P9 Ranajithpura	Sandur	7.20	Iron ore
66	K. Kishore Kumar	137 Lakshmipura	Sandur	8.18	Iron ore
67	K. Giriyamma	212 Lakshmipura	Sandur	6.02	Iron ore
68	Gadhi Linganagowda	286/4 Bujanganagar	Sandur	5.10	Iron ore
69	Meti Kenchappa	328 Lakshmipura	Sandur	5.12	Iron ore

1	2	3	4	5	6
70	Sathish Kumar	54/1 Bhujanganagar	Sandur	1.60	Iron ore
71.	K. Ramappa	95/2 Narayanapura	Sandur	4.22	Iron ore
72	Nari Kotra basamma	147/2 Lakshmipura	Sandur	1.42	Iron ore
73	M. Abdul Jahid	337 Nagathibasapura	Hadagali	4.08	Iron ore
74	Narayana Rao Nimbalkar	138 Lakshmipura	Sandur	5.00	Iron ore
75	Sanjay Markanda	33/N Jambunathana halli	Hospet	2.31	Iron ore
76	D. Sheshanna Shetty	159 Yeshwantha nagar	Sandur	0.20	Iron ore
77	M.A. Bhasam	76/C Jambunathanahalli	Hospet	2.00	Iron ore
78	Dinesh Ajjina	108 Sankalapura	Hospet	2.13	Iron ore

ಶ್ರೀ ಎಂ. ಮಹದೇವ : ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇನ್‌ಸಫಿಷಿಯೆಂಟ್ ಇನ್‌ಫಾರ್ಮೇಷನ್ ಅನ್ನು ಫೀಡ್ ಮಾಡಿದ್ದೀರಿ. ಏಕೆಂದರೆ, ನಾನು ಅಕ್ರಮ ಗಣಿಗಾರಿಕೆಯ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ತಾವು 78 ಅಕ್ರಮ ಗಣಿಗಾರಿಕೆಗಳ ವಿವರಗಳನ್ನು ಕೊಟ್ಟಿದ್ದೀರಿ. That is all pertaining to Patta lands. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರುವುದೇನೆಂದರೆ, ಈ ಇಲ್ಲೀಗಲ್ ಮೈನಿಂಗ್ ಮೂರು ಕೆಟಗರಿಗಳಲ್ಲಿ ನಡೆಯುತ್ತಿದೆ. ಒಂದು, ಲೈಸೆನ್ಸ್ ಹೋಲ್ಡರ್ಸ್ ಸರ್ಕಾರದಿಂದ ಲೈಸನ್ಸ್ ತೆಗೆದುಕೊಂಡು ಪಕ್ಕದಲ್ಲಿರತಕ್ಕಂಥ ಫಾರೆಸ್ಟ್ ಲ್ಯಾಂಡ್

ಅನ್ನು ಎನ್‌ಕ್ರೋಚ್ ಮಾಡಿ ಇಲ್ಲೀಗಲ್ ಮೈನಿಂಗ್ ಮಾಡುತ್ತಿರುವುದು. ಎರಡನೆಯದು, ಮೈನಿಂಗ್‌ಗೆ ಪರ್ಮಿಷನ್ ಇಲ್ಲದೇ, ಅಕ್ರಮವಾಗಿ ಫಾರೆಸ್ಟ್ ಲ್ಯಾಂಡ್‌ನಲ್ಲಿ ಮೈನಿಂಗ್ ಮಾಡುತ್ತಿರುವುದು. ಮೂರನೆಯದು, ಬಳ್ಳಾರಿಯಲ್ಲಿ ಈಗ ಓಪನ್ ಫೀಲ್ಡ್ ಮೈನಿಂಗ್ ಇದ್ದು, ಸ್ವಂತ ಜಮೀನುಗಳಲ್ಲಿ ಕೂಡ ಅದಿರು ಸಿಗುತ್ತಿರುವುದರಿಂದ ಸರ್ಕಾರದ ಪರ್ಮಿಷನ್ ತೆಗೆದುಕೊಳ್ಳದೇ ಪಟ್ಟಾ ಲ್ಯಾಂಡ್‌ಗಳಲ್ಲಿ ಮೈನಿಂಗ್ ಮಾಡುತ್ತಿರುವುದು. ನನಗೆ ತಿಳಿದ ಪ್ರಕಾರ, 78 ಅಕ್ರಮ ಗಣಿಗಾರಿಕೆಗಳ ಬಗ್ಗೆ ತಾವು ಕೊಟ್ಟಿರತಕ್ಕಂಥ ಮಾಹಿತಿ ಮೂರನೇ ಕೆಟಗರಿಗೆ ಸಂಬಂಧಪಡುತ್ತದೆ. ನಾನು ಕೇಳಿರುವ ಇನ್ನೊಂದು ಪ್ರಶ್ನೆಯೆಂದರೆ, ಅಕ್ರಮ ಗಣಿಗಾರಿಕೆಯಿಂದ ಇದುವರೆಗೂ ಸರ್ಕಾರದ ಬೊಕ್ಕಸಕ್ಕೆ ಆಗಿರತಕ್ಕಂಥ ನಷ್ಟ ಎಷ್ಟು ಎಂದು ನಾನು ಕೇಳಿದ್ದೇನೆ. ತಾವು ಉತ್ತರದಲ್ಲಿ, ದಂಡ ವಿಧಿಸಿರುವಂಥ ಪ್ರಕರಣಗಳನ್ನು ಮಾತ್ರ ಹೇಳಿದ್ದೀರಿ. ಅದರಲ್ಲಿ ಎಷ್ಟು ಅಮೌಂಟ್ ಇನ್‌ವಾಲ್ವ್ ಆಗಿದೆ ಎನ್ನುವುದನ್ನು ಹೇಳಿಲ್ಲ. ಎರಡನೆಯದಾಗಿ, ತಾವು ಪೈನ್ ಹಾಕಿರತಕ್ಕಂಥಾದ್ದನ್ನು ಹೇಳಿದ್ದೀರಿ. ಫೈನ್ ಹಾಕಿರತಕ್ಕಂಥಾ ವಿಚಾರವನ್ನು ಹೇಳಿರುವುದರಲ್ಲಿ ಕೂಡ ವ್ಯತ್ಯಾಸಗಳಿವೆ. ಏಕೆಂದರೆ, ಫಾರೆಸ್ಟ್ ಮಿನಿಸ್ಟರ್ ಆದ ಮಾನ್ಯ ಚನ್ನಿಗಪ್ಪನವರು ಒಂದು ಕಡೆ ಪತ್ರಿಕೆಗಳಲ್ಲಿ ಮಾತನಾಡುತ್ತಾ, ಅಮೌಂಟ್ ಇನ್‌ವಾಲ್ವ್ಡ್ ಅನ್ನು ಹೇಳುವುದರ ಜೊತೆಗೆ ಮೇ 18ನೇ ತಾರೀಖು ಸರ್ಕಾರ ಹಾಕಿರತಕ್ಕಂಥ ಫೈನ್ 18 ಕೋಟಿ ರೂ. ಎಂದು ಹೇಳಿದ್ದಾರೆ. ಹಾಗಾಗಿ, ಈ ವಿವರಗಳು ಸಂಪೂರ್ಣವಾಗಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಇದರ ಬಗ್ಗೆ ತಾವು ತಮ್ಮ ಉತ್ತರವನ್ನು ತಿಳಿಸಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಸದಸ್ಯರು ಮೂರು ರೀತಿಯ ಅಕ್ರಮ ಗಣಿಗಾರಿಕೆಗಳು ನಡೆಯುತ್ತಿವೆ ಎಂದು ಹೇಳಿದ್ದಾರೆ. ಗಣಿಗಾರಿಕೆಯ ವಿಚಾರದಲ್ಲಿ 8 ರೀತಿಯ ಉಲ್ಲಂಘನೆಗಳಾಗತಕ್ಕಂಥಾದ್ದನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. (1) ಅನುಮೋದನೆ ಪಡೆದ ನಿಗದಿತ ಪ್ರದೇಶದ ಹೊರಗೆ ಗಣಿಗಾರಿಕೆ ನಡೆಸತಕ್ಕಂಥಾದ್ದು (2) ಅನುಮೋದನೆ ಪಡೆದು ನಿಗದಿ ಪಡಿಸಿದ ಅರಣ್ಯ ಪ್ರದೇಶದ ಹೊರಗೆ ಗಣಿಗಾರಿಕೆ ನಡೆಸತಕ್ಕಂಥಾದ್ದು (3) ಅರಣ್ಯ ಸಂರಕ್ಷಣಾ ಕಾಯ್ದೆ 80 ರಡಿಯಲ್ಲಿ ಸೂಕ್ತ ಪರವಾನಗಿ ಇಲ್ಲದೇ ಗಣಿಗಾರಿಕೆ ನಡೆಸುವುದು (4) ಅನುಮೋದಿತ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಖನಿಜಗಳನ್ನು ಹೊರತೆಗೆಯುವುದು (5) ಅಧಿಕೃತ ಪರವಾನಗಿ ಮತ್ತು ಲೈಸೆನ್ಸ್ ಇಲ್ಲದೇ ಗಣಿಗಾರಿಕೆ ನಡೆಸುವುದು (6) ಪರಿಸರ ಕಾಯ್ದೆಯಡಿ ಅನುಮೋದನೆ ಇಲ್ಲದೇ ಗಣಿಗಾರಿಕೆ ನಡೆಸುವುದು (7) ಖಾಸಗಿ ಜಮೀನುಗಳ ಮೇಲ್ಭಾಗದಲ್ಲಿರುವ ಖನಿಜಗಳನ್ನು ಅನಧಿಕೃತವಾಗಿ ತೆಗೆಯುವುದು ಮತ್ತು (8) ವಾಹನಗಳಲ್ಲಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಖನಿಜಗಳನ್ನು ಸಾಗಾಣಿಕೆ ಮಾಡತಕ್ಕಂಥಾದ್ದು ಹಾಗೂ ಅನಧಿಕೃತವಾಗಿ ಖನಿಜಗಳನ್ನು ಸಾಗಾಣಿಕೆ

ಮಾಡತಕ್ಕಂಥಾದ್ದು. ಗಣಿಗಾರಿಕೆಯನ್ನು ಉಲ್ಲಂಘನೆ ಮಾಡಿರತಕ್ಕಂಥ ವಿಷಯದಲ್ಲಿ 78 ಅಕ್ರಮ ಗಣಿಗಾರಿಕೆಯ ಪ್ರಕರಣಗಳಲ್ಲಿ ದಂಡವನ್ನು ವಿಧಿಸಿದ್ದಾರೆ. ಬಳ್ಳಾರಿ ಜಿಲ್ಲೆಗೆ ಸಂಬಂಧಪಟ್ಟ ಹಾಗೆ 259 ಪ್ರಕರಣಗಳಲ್ಲಿ 1.43 ಕೋಟಿ ರೂಪಾಯಿಗಳ ದಂಡವನ್ನು ವಸೂಲಿ ಮಾಡಿರತಕ್ಕಂಥಾದ್ದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲು ಬಯಸುತ್ತೇನೆ. ಬಳ್ಳಾರಿ ಜಿಲ್ಲೆಯಲ್ಲಿನ ಇಂತಹ ಅಕ್ರಮ ಗಣಿಗಾರಿಕೆ ಚಟುವಟಿಕೆಗಳನ್ನು ತಡೆಗಟ್ಟಲು ಹಿಂದಿನ ಸರ್ಕಾರ ಟಾಸ್ಕ್ ಫೋರ್ಸನ್ನು ಮಾಡಿದ್ದು, ಈ ಟಾಸ್ಕ್ ಫೋರ್ಸ್‌ನಲ್ಲಿ ಜಿಲ್ಲಾ ಪೊಲೀಸ್ ಮುಖ್ಯಸ್ಥರು, ಸಾರಿಗೆ ಇಲಾಖೆಯ ಅಧಿಕಾರಿಗಳು, ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಇರುತ್ತಾರೆ. ಈ ಟಾಸ್ಕ್ ಫೋರ್ಸ್ ಮುಖಾಂತರ ಕಾರ್ಯಾಚರಣೆಯನ್ನು ಮಾಡುವುದರ ಜೊತೆಗೆ ಐದು ಚೆಕ್‌ಪೋಸ್ಟ್‌ಗಳನ್ನು ಆ ಭಾಗದಲ್ಲಿ ಸ್ಥಾಪನೆ ಮಾಡಲಾಗಿದೆ. ಸಾರ್ವಜನಿಕರು ದೂರು ದಾಖಲು ಮಾಡಲು ಒಂದು ಹೆಲ್ಪ್ ಲೈನ್ ಅನ್ನು ಸ್ಥಾಪಿಸಿದ್ದು, ಅದರ ಮುಖಾಂತರ ಸಾರ್ವಜನಿಕರು ಅಕ್ರಮ ಗಣಿಗಾರಿಕೆಗಳನ್ನು ಅಧಿಕಾರಿಗಳ ಗಮನಕ್ಕೆ ತರಲು ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ. ಬಳ್ಳಾರಿ ಜಿಲ್ಲೆಗೆ ಸಂಬಂಧಪಟ್ಟ ಹಾಗೆ 78 ಪ್ರಕರಣಗಳಲ್ಲಿ 1.43 ಕೋಟಿ ರೂಪಾಯಿಗಳ ದಂಡವನ್ನು ವಸೂಲಿ ಮಾಡಿದ್ದೇವೆ.

ಶ್ರೀ ಎಂ. ಮಹದೇವ : ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ತಮ್ಮ ಅರಣ್ಯ ಸಚಿವರು ತಮಗೆ ಒಂದು ವರದಿಯನ್ನು ಕೊಟ್ಟಿದ್ದಾರೆ ಎಂದು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಆ ರಿಪೋರ್ಟ್ ಪ್ರಕಾರ, ಅದರಲ್ಲಿ ಮಾನ್ಯ ಚನ್ನಿಗಪ್ಪನವರು ಹೇಳಿರತಕ್ಕಂಥಾದ್ದು total amount involved is Rs. 24 crores. ಇದುವರೆಗೂ 24 ಕೋಟಿ ರೂಪಾಯಿಗಳಷ್ಟು ಇಲ್ಲೀಗಲ್ ಮೈನಿಂಗ್ ಆಗಿದೆ, ಅದರಲ್ಲಿ 20 ಮೇಜರ್ ಕಂಪನಿಗಳಿವೆ ಎಂದು ಅವರು ಹೇಳಿದ್ದಾರೆ. ಅದರ ಬಗ್ಗೆ ತಾವು ಉತ್ತರವನ್ನು ನೀಡಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಅರಣ್ಯ ಸಚಿವರು ಕೊಟ್ಟಿರತಕ್ಕಂಥ ಹೇಳಿಕೆ ಏನಿದೆ ಎಂದರೆ, ಗಣಿಗಾರಿಕೆ ಪ್ರಾರಂಭವಾದ ನಂತರ ಅದಕ್ಕೆ ಬಳ್ಳಾರಿ ಜಿಲ್ಲೆಯಲ್ಲಿ ಕೆಲವು ಊರುಗಳಲ್ಲಿ ಪರ್ಮಿಷನ್ ಕೊಟ್ಟ ನಂತರ ಇತ್ತೀಚೆಗೆ ಈ ಗಣಿಗಾರಿಕೆಯಲ್ಲಿ ಏನು ವ್ಯವಹಾರಗಳಾಗುತ್ತಿವೆ ಎಂದು ಹೇಳತಕ್ಕಂಥ ಸಂದರ್ಭದಲ್ಲಿ ಅವರು ಸರ್ಕಾರಕ್ಕೆ 25 ಸಾವಿರ ಕೋಟಿ ರೂಪಾಯಿಗಳ ಆದಾಯ ಬರಬಹುದು ಎನ್ನುವ ಮಾತನ್ನು ಹೇಳಿದ್ದಾರೆ. ಗಣಿಗಾರಿಕೆಯ ಪರಿವಾನಗಿಯನ್ನು ಕೊಡತಕ್ಕಂಥಾದ್ದು ಹಾಗೂ ನೀತಿನಿಯಮಗಳನ್ನು ಮಾಡತಕ್ಕಂಥಾದ್ದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರತಕ್ಕಂಥಾದ್ದು ಆಗಿದೆ. ಈ ವಿಷಯದ ಬಗ್ಗೆ ನಾನು ಈಗಾಗಲೇ ಕೇಂದ್ರ ಸರ್ಕಾರದ ಗಣಿ ಖಾತೆಯ ಮಂತ್ರಿಗಳಿಗೆ ಒಂದು ಪತ್ರವನ್ನು

ಬರೆದಿದ್ದು, ಈ ವಿಷಯದಲ್ಲಿ ಕೆಲವು ಮಾರ್ಪಾಡುಗಳನ್ನು ತರಬೇಕು ಎಂದು ಕೇಂದ್ರ ಸಚಿವರಿಗೆ ನಾನು ಮನವಿಯನ್ನು ಮಾಡಿದ್ದೇನೆ. ಇದರಲ್ಲಿ ಈವತ್ತಿನ ಆ ಐರನ್ ಓರ್‌ನ್ನು ಎಕ್ಸ್‌ಪೋರ್ಟ್ ಮಾಡುವುದರಲ್ಲಿ ಬೆಲೆಯ ಬಗ್ಗೆ ಏನು ಚರ್ಚೆ ಮಾಡುತ್ತಿದ್ದೇವೆ. ಇದರಿಂದ ಸರ್ಕಾರಕ್ಕೆ ಆದಾಯ ಬರತಕ್ಕದ್ದು ಕಡಿಮೆಯಾಗುತ್ತದೆ ಎಂಬ ಅಭಿಪ್ರಾಯವನ್ನು ಅವರು ಕೊಟ್ಟಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ನನ್ನ ಒಂದೇ ಒಂದು ಸಲಹೆ ಏನೆಂದರೆ, ಈಗ ನೀವು ಕೇವಲ ಐದು ಚೆಕ್‌ಪೋಸ್ಟ್‌ಗಳನ್ನು ಬಳ್ಳಾರಿ ಜಿಲ್ಲೆಯಲ್ಲಿ ಮಾಡಬೇಕು ಎನ್ನತಕ್ಕ ಪ್ರಸ್ತಾವನೆಯನ್ನು ಇಟ್ಟಿದ್ದೀರಿ. ಇದು ಕೇವಲ. ಬಳ್ಳಾರಿ ಜಿಲ್ಲೆ ಪ್ರಚಾರದಲ್ಲಿರುವ ಜಿಲ್ಲೆ, ಅದರ ಬಗ್ಗೆಯೇ ಎಲ್ಲರು ಮಾತನಾಡುತ್ತಾರೆ. ಆದರೆ ಅದೇ ರೀತಿಯಾಗಿ ಅದು ಚಿತ್ರದುರ್ಗ ಇರಬಹುದು, ಚಿಕ್ಕನಾಯಕನಹಳ್ಳಿ ಇರಬಹುದು ಅಥವಾ ಬೇರೆ ಕಡೆ ಇದೆ ರೀತಿಯಾಗಿ ಗ್ರಾನೈಟ್ಸ್‌ನ್ನು ತೆಗೆದುಕೊಂಡು ಹೋಗತಕ್ಕ ಭಾಗಗಳಾಗಿರಬಹುದು. ಅಲ್ಲಿಯು ಕೂಡ ಚೆಕ್‌ಪೋಸ್ಟ್‌ಗಳನ್ನು ಮಾಡತಕ್ಕ ಅವಶ್ಯಕತೆ ಇದೆ. ಜೊತೆಗೆ ಯಾವುದೇ ಇಲಾಖೆಯಿಂದ ಅವರು ಪರ್ಮಿಷನ್ ತೆಗೆದುಕೊಂಡು ಹೋಗುತ್ತಾರೋ ಆ ಪರ್ಮಿಷನ್‌ನನ್ನು ಕೂಡ ಚೆಕ್ ಮಾಡಬೇಕು. ಎಲ್ಲಿ ಎಕ್ಸ್‌ಪೋರ್ಟ್ ಆಗುತ್ತದೆ ಅಲ್ಲಿಯು ಕೂಡ ಇದನ್ನು ಚೆಕ್ ಮಾಡಬೇಕು. ಅಂದರೆ ಎರಡು ಕಡೆ ಚೆಕ್ ಮಾಡಿದರೆ really ಏನು quantity ಹೋಗಿದೆ ಎಂಬುದು ಗೊತ್ತಾಗುತ್ತದೆ. ರೆವಿನ್ಯೂ ಇಲಾಖೆಯ ಲ್ಯಾಂಡ್‌ನಲ್ಲಿ ಹೋಗಿದ್ದರೆ, ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಯವರು ಪರ್ಮಿಟ್ ಕೊಟ್ಟಿದ್ದರೆ ಅವರು ಎಷ್ಟು ಕೊಟ್ಟರು, ಎಷ್ಟು ಕ್ವಾಂಟಿಟಿಗೆ ಕೊಟ್ಟರು ಮತ್ತು ಎಕ್ಸ್‌ಪೋರ್ಟ್ ಮಾಡತಕ್ಕ ಜಾಗದಲ್ಲಿ. ಅಂದರೆ ಮಂಗಳೂರು ಪೋರ್ಟ್ ಇರಬಹುದು ಕಾರವಾರ ಪೋರ್ಟ್ ಇರಬಹುದು ಅಥವಾ ವಿಶಾಖಪಟ್ಟಣಂ ಇರಬಹುದು, ಅವರು ಈ ರೀತಿ ಅನೇಕ ಕಡೆಗಳಿಂದ ಮಾಡುತ್ತಾರೆ. ಒಂದೆ ಕಡೆಯಿಂದ ಎಕ್ಸ್‌ಪೋರ್ಟ್ ಮಾಡುತ್ತಿಲ್ಲ, ಬರೇ ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಪೋರ್ಟ್‌ಗಳಿಂದ ಮಾಡುವುದಿಲ್ಲ. ಬೇರೆ ಬೇರೆ ಕಡೆಗೂ ತೆಗೆದುಕೊಂಡು ಹೋಗಿ ಮಾಡುತ್ತಾರೆ. ಆದರೆ ನಮ್ಮ ರಾಜ್ಯದಿಂದ ಎಲ್ಲೆಲ್ಲಿ ಪರ್ಮಿಟ್ಸ್ ಹೋಗುತ್ತದೆ ಆ ಪರ್ಮಿಟ್, ಕ್ವಾಂಟಿಟಿ ಮತ್ತು ಇಲ್ಲಿ ಕೊಟ್ಟಂಥ ಪರ್ಮಿಟ್ ಕ್ವಾಂಟಿಟಿ ಏನಿದೆ ಅದನ್ನು surprise check ಆಗಲಿ ಅಥವಾ ಒಂದು ಸ್ಕ್ವಾಡ್ ಆಗಲಿ ಮಾಡಿದರೆ ನಮಗೆ ನಿಜವಾದಂಥ ಕ್ವಾಂಟಿಟಿ ಮತ್ತು ಯಾರು ತಪ್ಪಿಸಿಕೊಂಡು ಹೋಗುತ್ತಾರೆ ಅವರು ಸಹ ಸಿಕ್ಕಿಬೀಳುತ್ತಾರೆ. ಅದಕ್ಕೋಸ್ಕರ ಇದನ್ನು ಕೇವಲ ನಾಲ್ಕೈದು ಕಡೆ ಮಾಡಿ ಟೈಟ್ ಮಾಡಿದ್ದೇವೆ ಎನ್ನುವುದಕ್ಕಿಂತ ಇದೇ ರೀತಿ ಬೇರೆ ಕಡೆ ಕೂಡ ಸ್ವಲ್ಪ ಕಡೆ ಮಾಡಿದರೆ ಹೆಚ್ಚಿನ ಆದಾಯ ತೆಗೆದುಕೊಳ್ಳಲು

ಸಾಧ್ಯವಾಗುತ್ತದೆ ಮತ್ತು ಏನು ಕ್ವಾಂಟಿಟಿ ಹೊರಗಡೆ ಹೋಗುತ್ತಿದೆ without permit ಅಥವಾ without giving royalty ಅದನ್ನು ಸಹ ನಿಲ್ಲಿಸಲು ಸಾಧ್ಯವಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, Starting point ಮೈನ್ಸಿಂಗ್ ಲೋಡ್ ಏನು ಮಾಡಿ ಕಳುಹಿಸುತ್ತಾರೆ ಅದು ಮತ್ತು shipment ಎಷ್ಟು ಆಗಿದೆ ಅದೆರಡನ್ನು ತೆಗೆಸಿ ನೋಡಿದರೆ ಲೆಕ್ಕ ಸಿಗುತ್ತದೆ.

ಶ್ರೀ ಎಂ. ಮಹದೇವ : ಮಾನ್ಯ ಮುಖ್ಯಮಂತ್ರಿಯವರಲ್ಲಿ ಗಮನ ಸೆಳೆಯುವುದೇನೆಂದರೆ, ತಾವು ಮಾತನಾಡಬೇಕಾದರೆ ರಾಯಲ್ಟಿಯು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದು ಎಂದು ಹೇಳಿದಿರಿ. ಈ ವಿಚಾರದಲ್ಲಿ ತಮ್ಮ ಗಮನಕ್ಕೆ ತರುವುದೇನೆಂದರೆ. ಇದರಲ್ಲಿ ಯಾವ ಪಕ್ಷದವರು ಅಥವಾ ಯಾವುದೇ ಅಧಿಕಾರದಲ್ಲಿರತಕ್ಕವರನ್ನು ಪೇಚಿಗೆ ಸಿಕ್ಕಿಸುವ ಪ್ರಶ್ನೆಯಲ್ಲ. ಸರ್ಕಾರಕ್ಕೆ ಆಗುತ್ತಿರುವ ನಷ್ಟವನ್ನು ತಾವು ಹಿಡಿಯಲು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೀರೆಂದು ತಾವು ಪತ್ರಿಕೆಗಳ ಮೂಲಕ ಹೇಳಿದ್ದೀರಿ. ಅದಕ್ಕೆ ತಾವು ಕಾರ್ಯೋನ್ಮುಖರಾಗಬೇಕೆಂಬುದು ನನ್ನ ವಿನಂತಿ. ಈಗಾಗಲೇ ಚೆನ್ನಿಗಪ್ಪನವರು ಇದರಲ್ಲಿ 24 ಸಾವಿರ ಕೋಟಿಯಷ್ಟು ಇಲ್ಲೀಗಲ್ ಆಗಿದೆ ಎಂದು ಹೇಳಿದ್ದಾರೆ. ಈವತ್ತು ಸರ್ಕಾರದಲ್ಲಿ ರಾಯಲ್ಟಿ ಫಿಕ್ಸ್ ಮಾಡಿರುವುದು ಮೊನ್ನೆ 24 ರಿಂದ 27 ರೂಪಾಯಿಗೆ ರೈಸ್ ಆಗಿದೆ. ಇಡೀ ಮಹಿವಾಟನ್ನು ನೀವು ಗಮನದಲ್ಲಿ ಇಟ್ಟುಕೊಂಡರೆ ಸರ್ಕಾರದ ರಾಯಲ್ಟಿ ಬರುತ್ತಿರುವುದು ಕೇವಲ ಎರಡು ಪರ್‌ಸೆಂಟ್ ಮಾತ್ರ. ಈಗ ಫಿಕ್ಸ್ ರಾಯಲ್ಟಿ ಇದೆಯಲ್ಲಾ ಅದರಿಂದಲೇ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತಿರುವುದು. ಏನು market rate royalty ಎಂದು fix ಮಾಡಬೇಕೆಂದು ತಾವು ಪ್ರಯತ್ನ ಮಾಡುತ್ತೀರಿ, ಅದರಿಂದ ಖಂಡಿತವಾಗಿ ಸರ್ಕಾರದ ಬೊಕ್ಕಸಕ್ಕೆ ಹೆಚ್ಚು ಹಣ ಬರುತ್ತದೆ. ಇದು ಕೇವಲ ಬಳ್ಳಾರಿಯಲ್ಲಿ ನಡೆಯುತ್ತಿರತಕ್ಕದ್ದು ಬೊಕ್ಕಸಕ್ಕೆ ನಷ್ಟವಾಗುತ್ತಿರುವುದು ಒಂದೇ ವಿಚಾರವಲ್ಲ, ಈವತ್ತು ಹಲವಾರು ಸಮಸ್ಯೆಗಳು ಈ ಮೈನ್ಸ್‌ನಿಂದ ಬಳ್ಳಾರಿಯ ಜನರು ಎದುರಿಸುತ್ತಿದ್ದಾರೆ. ಇವತ್ತು ಬಳ್ಳಾರಿಯಲ್ಲಿರತಕ್ಕ ನೀರು ಕಲುಷಿತವಾಗಿದೆ.

ಅಧ್ಯಕ್ಷರು : ತಾವು ಬೇರೆ ಬೇರೆ ವಿಚಾರಗಳನ್ನು ಹೇಳಬೇಡಿ. ಉಪ ಪ್ರಶ್ನೆ ಕೇಳಿ. ಅವರು ಉತ್ತರ ಕೊಟ್ಟಿದ್ದಾರೆ. ಅದಕ್ಕೆ ಉಪ ಪ್ರಶ್ನೆ ಕೇಳಿ.

ಶ್ರೀ ಎಂ. ಮಹದೇವ : ನಾನು ಏಕೆ ಹೇಳುತ್ತಿದ್ದೇನೆಂದರೆ, ಇಲ್ಲಿ ಯಾವುದೇ ಸರ್ಕಾರವನ್ನು ಪೇಚಿಗೆ ಸಿಲುಕಿಸತಕ್ಕದ್ದಲ್ಲ. ಆದರೆ ಆಗುತ್ತಿರತಕ್ಕದನ್ನು ನಾನು actually ಗಮನಸೆಳೆಯುವ ಸೂಚನೆಯಲ್ಲಿ ಇದನ್ನು ಕೇಳಿದ್ದೆ, ತಾವು ಅವಕಾಶ ಕೊಟ್ಟಿಲ್ಲ. ಆದರೆ ಪ್ರಶ್ನೆ ಇರುವುದರಿಂದಲೇ ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಜೊತೆಗೆ law and

order question ಮೊನ್ನೆ ಒಬ್ಬ ಮೈನ್ owner ಇನ್ನೊಬ್ಬ Mine owner ಮೇಲೆ ಧಾಳಿ ನಡೆಸಿ ಸುಮಾರು 30–40 ಕೋಟಿ ರೂಪಾಯಿ ನಷ್ಟವಾಗಿದೆ. ಜೊತೆಗೆ ಅಲ್ಲಿರತಕ್ಕ rampant child labour. ಇಲ್ಲಿ ಕಿರಾಣಿ ಅಂಗಡಿಯಲ್ಲಿ ಕುಳಿತುಕೊಂಡು ಒಬ್ಬ ಇಬ್ಬರು ಹುಡುಗರು ಇದ್ದರೆ ಅದರ ಲೈಸೆನ್ಸ್ ಕ್ಯಾನ್ಸಲ್ ಮಾಡುತ್ತಾರೆ. ಆದರೆ ಬಳ್ಳಾರಿಯಲ್ಲಿ rampant ಆಗಿ child labour ಇದ್ದರೂ ಕೂಡ ಒಬ್ಬ labour officer ಹೋಗಿ ಅಲ್ಲಿ child labourನ್ನು ಡಿಟೆಕ್ಟ್ ಮಾಡಿಲ್ಲ. ಜೊತೆಗೆ ತಾವು envirnonment pollution ಎಂದು ಹೇಳಿದಿರಿ. ಬೆಂಗಳೂರಿನಲ್ಲಿರತಕ್ಕ ಹತ್ತಾರು factory ಗಳಿಗೆ environment clearance ಬೇಕು. ಈ ಮೈನ್ಸ್‌ಗಳಿಗೆ ಯಾವುದೇ ಕ್ಲಿಯರೆನ್ಸ್ ಬೇಡವೆ? ಇಷ್ಟನ್ನು ನಾನೇಕೆ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆಂದರೆ, ತಾವು ಈ ವಿಚಾರದಲ್ಲಿ.....

ಅಧ್ಯಕ್ಷರು : ಅನೇಕ ವಿಚಾರಗಳನ್ನು ಪ್ರಶ್ನೆ ಮಾಡುವ ಸಮಯವಲ್ಲ ಇದು. ನೀವು ಉಪಪ್ರಶ್ನೆಯನ್ನು ಕೇಳಿ. ಅವರು ಉತ್ತರ ಕೊಟ್ಟಿದ್ದಾರೆ ಅದರ ಬಗ್ಗೆ ಉಪಪ್ರಶ್ನೆ ಕೇಳಿ.

ಶ್ರೀ ಎಂ. ಮಹದೇವ : ನಾನು ಗಮನಸೆಳೆಯುವ ಸೂಚನೆಯಲ್ಲಿ ಇದನ್ನು ಕೇಳಿದ್ದೆ. ತಾವು ಅವಕಾಶ ಕೊಟ್ಟಿಲ್ಲ. ಇದು ಮಹತ್ವವಾದ ವಿಚಾರ. ಸರ್ಕಾರದ ಗಮನಕ್ಕೆ ತರತಕ್ಕದ್ದು ಸರ್ಕಾರದ ಬೊಕ್ಕಸಕ್ಕೆ ಆಗುತ್ತಿರುವ ನಷ್ಟ ಇದನ್ನು ಕೇಳುವ ಪ್ರಶ್ನೆಯಲ್ಲವೆಂದರೆ ನಾನೇನು ಮಾತನಾಡುವುದಿಲ್ಲ, ನಮಸ್ಕಾರ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಈಗಾಗಲೇ ಸದನದ ಹಿರಿಯ ಸದಸ್ಯರುಗಳೇನು ಸಲಹೆಯನ್ನು ಕೊಟ್ಟಿದ್ದಾರೆ ಅದೇ ರೀತಿ ಈವತ್ತು ರೈಲ್ವೆ ಮತ್ತು ಪೋರ್ಟ್‌ನಲ್ಲಿ ಈ ಪರ್ಮಿಟನ್ನು ತೆಗೆದುಕೊಂಡು ಹೋಗತಕ್ಕ ಸಂದರ್ಭದಲ್ಲಿ ಅಲ್ಲಿಯೂ ನಾವು ಈಗಾಗಲೇ ಸಂಪೂರ್ಣವಾದ ಮಾಹಿತಿಯನ್ನು ಪಡೆದುಕೊಳ್ಳತಕ್ಕ ವ್ಯವಸ್ಥೆ ಇದೆ. ಈವತ್ತೇನು total production ಆಗತಕ್ಕ 40 ಮಿಲಿಯನ್ ಟನ್‌ನಲ್ಲಿ 20 ಮಿಲಿಯನ್ ಟನ್ ಎಕ್ಸ್‌ಪೋರ್ಟ್ ಮಾಡತಕ್ಕದ್ದು ಉಳಿದುದ್ದನ್ನು local consumption ಗೆ ಉಪಯೋಗ ಮಾಡುತ್ತಿರುವುದು ಈ ಸಂದರ್ಭದಲ್ಲಿ ತಮ್ಮಗಳ ಗಮನಕ್ಕೆ ತರಬಯಸುತ್ತೇನೆ. ಈವತ್ತು ಈ ಒಂದು number of vehicle check ಮಾಡಿರತಕ್ಕದ್ದು ಸುಮಾರು 7 ಲಕ್ಷದ 22 ಸಾವಿರ ಎಂಬುದನ್ನು ತಮ್ಮ ಗಮನಕ್ಕೆ ತರುತ್ತ, ಈವತ್ತು ಸದನದ ಹಿರಿಯ ಸದಸ್ಯರುಗಳು ಈ ಒಂದು ವಿಷಯದಲ್ಲಿ ಏನು ಸಲಹೆಗಳನ್ನು ಕೊಟ್ಟಿದ್ದಾರೋ ಅದರ ಬಗ್ಗೆ ಇನ್ನು ಪರಿಣಾಮಕಾರಿಯಾಗಿ ಕ್ರಮ ತೆಗೆದುಕೊಳ್ಳಲು ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ.